ಸದನದಲ್ಲಿ ಉತ್ತರಿಸುವ ಪ್ರಶ್ನೆ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: 18ನೇ ಜುಲೈ, 2019

ಕೆಆರ್‌ಇಡಿಎಲ್ ನಿಗಮದ ಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) -

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) -

46 (544+545) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಇಡಿಎಲ್) ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 48 ಗುತ್ತಿಗೆ ನೌಕರರ ಪೈಕಿ ಎಷ್ಟು ಜನರನ್ನು ಖಾಯಂ ಪ್ರಕ್ರಿಯೆಯಿಂದ ಕೈಬಿಡಲಾಯಿತು ; ಕೈಬಿಡಲು ಕಾರಣಗಳೇನು ; ವಿವರವಾಗಿ ಹೆಸರು ಹುದ್ದೆಯ ಪದನಾಮ, ವಿದ್ಯಾರ್ಹತೆ, ಹಾಗೂ ಇವರು ಮಾಸಿಕ ಪಡೆಯುತ್ತಿದ್ದ ವೇತನ ಸಹಿತ ಮಾಹಿತಿ ನೀಡುವುದು;

(ಆ) ಖಾಯಂ ಪ್ರಕ್ರಿಯೆಯಿಂದ ಕೈಬಿಟ್ಟ ನೌಕರರನ್ನು ಈ ಮೊದಲು ಖಾಯಂ ಮಾಡಿದ ನೌಕರರಂತೆ ಸರಿಸಮಾನವಾಗಿ (On Par with) ಖಾಯಂ ಮಾಡುವಂತೆ ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ಮಾಡಿರುವುದು ನಿಜವೇ ;

(ಇ) ಇದರ ಸಂಬಂಧ ಕಾನೂನು ಇಲಾಖೆಯು ಇವರನ್ನು ಅವರಿಗೆ ಸರಿಸಮಾನಾಗಿ ವಿಲೀನ ಗೊಳಿಸುವಂತೆ ಅಭಿಪ್ರಾಯ ನೀಡಿದ್ದು ಈ ಅಭಿಪ್ರಾಯಕ್ಕೆ ಮಾನ್ಯ ಇಂಧನ ಸಚಿವರು ಅನುಮೋದನೆ ನೀಡಿದರೂ ಕೂಡಾ ಅಧಿಕಾರಿಗಳು ಇವರನ್ನು ಖಾಯಂ ಮಾಡದಿರಲು ಕಾರಣಗಳೇನು ;

(ಈ) ಮಾನ್ಯ ಉಚ್ಛನ್ಯಾಯಾಲಯದ ಆದೇಶವು ಸಂವಿಧಾನದ ವಿಧಿ ಅನ್ವಯ ಇಲಾಖೆಗೆ ಬೈಂಡಿಂಗ್ ಅಲ್ಲವೇ ಹಾಗಾದರೆ ಈ ಆದೇಶವನ್ನು ಜಾರಿಗೊಳಿಸದಿರಲು ಅಥವಾ ಮೇಲ್ಮನವಿಯನ್ನು ಸಲ್ಲಿಸದಿರಲು ಕಾರಣಗಳೇನು;

(ಉ) ಹಾಗಾದರೆ ಕಳೆದ 12 ವರ್ಷಗಳಿಂದ ಹೋರಾಟ ನಡೆಸುತ್ತಿರುವ ನೊಂದ ಈ ಅಭ್ಯರ್ಥಿಗಳನ್ನು ಸರ್ಕಾರವು ಯಾವ ಕಾಲಮಿತಿಯೊಳಗೆ ಮಾನ್ಯ ಉಚ್ಛನ್ಯಾಯಾಲಯದ ಆದೇಶದಂತೆ ಕೆಆರ್‌ಇಡಿಎಲ್ ಸಂಸ್ಥೆಯಲ್ಲಿ ಖಾಯಂ ಆಗಿ ವಿಲೀನಗೊಳಿಸಿ ಆದೇಶ ಹೊರಡಿಸಿ ನ್ಯಾಯ ಒದಗಿಸಲಾಗುವುದು ?